## ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
## ಸ್ಥಳಃ ಅರಕಲಗೂಡು

ಸಿಸಿ ನಂ. ಃ**980/2018**

ದಿನಾಂಕಃ **20/02/2023**

ಪಿರ್ಯಾದಿದಾರರುಃ ಅಬಕಾರಿ ಪೊಲೀಸ್

ವಿರುದ್ದ

ಆರೋಪಿ ಃ ಮಂಜೇಗೌಡ

## ದೋಷಾರೋಪಣೆ

ನಾನು ಶ್ರೀಮತಿ. ಚೇತನಾ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಅರಕಲಗೂಡು, ಆರೋಪಿಯಾದ

ಆರೋಪಿ ಮಂಜೇಗೌಡ
ಬಿನ್ ಮರೀಗೌಡ,
ಸುಮಾರು 48 ವರ್ಷ,
ವಾಸಃ ಸುಳಗೋಡು ಸೋಮವಾರ ಗ್ರಾಮ,
ಕೊಣನೂರು ಹೋಬಳಿ,
ಅರಕಲಗೂಡು ತಾಲ್ಲೂಕು.

### ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,

ದಿನಾಂಕಃ04-05-2018 ರಂದು ಸಂಜೆ 7.30 ಗಂಟೆ ಸಮಯದಲ್ಲಿ ಅಬಕಾರಿ ನಿರೀಕ್ಷಕರು ಸಿಬ್ಬಂದಿಯೊಂದಿಗೆ ಅರಕಲಗೂಡು ತಾಲ್ಲೂಕು, ಕೊಣನೂರು ಹೋಬಳಿ, ಸುಳಗೋಡು ಸೋಮವಾರ ಗ್ರಾಮದಲ್ಲಿ ಗಸ್ತು ಮಾಡುತ್ತಿದ್ದಾಗ ಅಕ್ರಮವಾಗಿ ಮಧ್ಯವನ್ನು ಮಾರಾಟ ಮಾಡುತ್ತಿರುವುದಾಗಿ ಮಾಹಿತಿ ದೊರೆತ್ತಿದ್ದರಿಂದ ಅದೇ ಗ್ರಾಮದ ಸರ್ಕಲ್ ಹತ್ತಿರ ನಿಂತಿದ್ದ ಪಂಚರಿಗೆ ಮಾಹಿತಿ ತಿಳಿಸಿ, ಪಂಚರೊಂದಿಗೆ ಗ್ರಾಮಕ್ಕೆ ಬಂದು ಆರೋಪಿಯಾದ ನಿಮ್ಮ ಚಿಲ್ಲರೆ ಅಂಗಡಿಯನ್ನು ಶೋದನೆ ಮಾಡಿದಾಗ ನೀವು

ಅಕ್ರಮವಾಗಿ ಯಾವುದೇ ಅನುಮತಿ ರಹದಾರಿ ಇಲ್ಲದೆ ಅಕ್ರಮ ಹಣ ಸಂಪಾದನೆಗಾಗಿ 90 ಮಿಲಿಯ 12 ಒರಿಜಿನಲ್ ಚಾಯ್ಸ್ ಡಿಲಕ್ಸ್ ಬ್ರಾಂಡಿ ಟೆಟ್ರಾ ಪ್ಯಾಕೇಟ್ ಗಳು (1.08) ಲೀಟರ್ ಮದ್ಯವನ್ನು ಹೊಂದಿರುವುದು ಕಂಡುಬಂದಿರುತ್ತದೆ. ಆದ್ದರಿಂದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂಃ32(1)ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

(ಈ ಆಪಾದನೆಯ ಅಂಶಗಳನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿ ತಿದ್ದುಪಡಿ ಮಾಡಿದ ನಂತರ ಸದರಿ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಗಿದೆ ಈ ಹೊತ್ತು ದಿನಾಂಕ 20 ನೇ ಫೆಬ್ರವರಿ-2023)

ಶ್ರೀಮತಿ. ಚೇತನಾ
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ ಅರಕಲಗೂಡು.

ಅರಕಲಗೂಡು ಅಧಿಕ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ

ಸಿ.ಸಿ. ನಂಃ 980/2018

ಪಿರ್ಯಾದಿಃ ಅಬಕಾರಿ ಪೊಲೀಸ್

ವಿರುದ್ಧಃ

ಆರೋಪಿಃ ಮಂಜೇಗೌಡ

ಪ್ರ-1 ಃ ನಿಮಗೆ ಮೇಲೆ ವಿವರಿಸಿದ ಆರೋಪಣೆ ವಿವರಗಳು ತಿಳಿಯಿತೇ ?

ಉತ್ತರ ಃ-

ಪ್ರ -2 ಃ ಮೇಲೆ ಓದಿ ಹೇಳಿದ ಆರೋಪಣೆಯನ್ನು ಒಪ್ಪುವಿರಾ ಅಥವಾ ವಿಚಾರಣೆ ಆಗಬೇಕೆ ?

ಉತ್ತರ ಃ-

(ಆರೋಪಿಗೆ ಆರೋಪಣೆಯನ್ನು ರಚಿಸಿ ಓದಿ ಹೇಳಿದ್ದು, ಆ ಪ್ರಕಾರವಾಗಿ ಆತ ಕೊಟ್ಟ ಉತ್ತರವನ್ನು ಮುಕ್ತ ನ್ಯಾಯಾಲಯದಲ್ಲಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಡೀಕರಿಸಲಾಗಿದೆ)

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ ಅರಕಲಗೂಡು.

ಆರೋಪಿಯ ಸಹಿಃ